

## ವರನಟನ ಮೂರು ಚಿತ್ರಗಳು

‘ವರನಟನ ಮೂರು ಚಿತ್ರಗಳು’ (ಗೋವಿಂದರಾಜು ಎಂ. ಕಲ್ಲೂರು, ಏ. 28) ಲೇಖನ, ರಾಜ್ ಚಿತ್ರಗಳ ಸಾರ್ವಕಾಲಿಕ ಮನ್ನಣೆಯ ಮರ್ಮವನ್ನು ಅರುಹುತ್ತದೆ. ಸರ್ವಕಾಲಕ್ಕೂ ಸಲ್ಲುವಂಥ, ಸರ್ವರೂ ಸಲಾಂ ಸಲ್ಲಿಸುವಂಥ ಉದಾತ್ತ ಮೌಲ್ಯಗಳು ಅಡಕವಾಗಿರುವ ಮಹೋನ್ನತ ಚಿತ್ರಗಳೆಂದರೆ ರಾಜ್ ಚಿತ್ರಗಳು ಎನ್ನುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ.

—ಎಚ್. ಸಿದ್ದಾರ್ಥ, ಕಾರ್ಕಳ

## ಚಿನ್ನದ ಹೊಳಪು ಕತ್ತಲ ಬದುಕು

‘ಚಿನ್ನದ ಹೊಳಪು ಕತ್ತಲ ಬದುಕು’ (ಎನ್. ಜಗನ್ನಾಥ ಪ್ರಕಾಶ್, ಮೇ 5) ಲೇಖನ ಕೆ.ಜಿ.ಎಫ್.ನ ಮತ್ತೊಂದು ಆಯಾಮವನ್ನು ತೆರೆದಿಟ್ಟಿದೆ. ಬ್ರಿಟಿಷ್ ವಸಾಹತುಶಾಹಿ ವ್ಯವಸ್ಥೆಯು ಅಲ್ಲಿನ ಗಣಿಕಾರ್ಮಿಕರನ್ನು ನಡೆಸಿಕೊಂಡ ರೀತಿ ಅಮಾನವೀಯ.

—ಶಶಾಂಕ್ ಎನ್., ಉದ್ಧಾದೇವರ ಮಠ

## ಅಂತಃಕರಣ ಕಲಕಿದ ಅಂಬೇಡ್ಕರ್ ಪತ್ರ

‘ನೀನಿರದಿದ್ದರೆ ನಾನೊಂದು ಕೊರಡಾಗಿ ಹೋಗುತಿದ್ದೆ’ (ಅನು: ಚೈತ್ರಿಕಾ ನಾಯ್ಕ, ಹರ್ಗಿ, ಏ. 21) ಅಂಬೇಡ್ಕರರು ಪತ್ನಿ ರಮಾಬಾಯಿಗೆ ಬರೆದ ಪತ್ರ ಓದುತ್ತಿದ್ದಂತೆಯೇ ನನ್ನ ಕಣ್ಣುಗಳಲ್ಲಿ ಅಶ್ರುಧಾರೆ ತಾನೇ ತಾನಾಗಿ ಬಂತು. ಅದರಲ್ಲೂ ಡಾ. ಅಂಬೇಡ್ಕರ್ ಅಲ್ಲಿ ಬರೆದ, ‘ನಮ್ಮ ಬಳಿ ದುಃಖದ ವಿನಾ ಬೇರೇನಿಲ್ಲ. ನಮ್ಮ ಜೊತೆ ಬಡತನ, ದಾರಿದ್ರ್ಯ ಬಿಟ್ಟು ಬೇರೆ ಭಾಗೀದಾರರಿಲ್ಲ. ಅವಮಾನ, ದ್ರೋಹ, ಅಲಕ್ಷ್ಯ, ಅನಾದರ ನಮ್ಮನ್ನು ನೆರಳಿನಂತೆ ಹಿಂಬಾಲಿಸುತ್ತಲೇ ಇವೆ...’ ಎಂಬ ಮಾತಂತೂ ಮನಸ್ಸನ್ನು ಕಲುಕುತ್ತದೆ. ಒಬ್ಬ ಮಹಾನ್ ಪ್ರತಿಭಾವಂತ, ಸಮಾಜಮುಖಿ ಚಿಂತಕನ ಸಾಂಸಾರಿಕ ಬದುಕು ಇಷ್ಟೊಂದು ಘೋರತಮವಾಗಿತ್ತೆಂಬುದು ಅವರ ಕಾಲದ ಪ್ರಪಂಚದ ಅರಿವಿಗೆ ಬಾರದೇ ಹೋಯಿತಲ್ಲ! ಹಾಗೆಯೇ, ಕಷ್ಟಕಾಲದಲ್ಲಿ ಪತಿಗೆ ನೈತಿಕ ಬೆಂಬಲ ನೀಡುತ್ತಿದ್ದ ರಮಾಬಾಯಿ ಅವರ ಬಗ್ಗೆ ಅಭಿಮಾನವೂ ಬಂತು.

—ಮಲ್ಲಿಕಾರ್ಜುನ ಹುಲಗಬಾಳಿ, ಬನಹಟ್ಟಿ

ಅಂಬೇಡ್ಕರರ ಪತ್ರವು ನನ್ನನ್ನು ಭಾವುಕನನ್ನಾಗಿ ಮಾಡಿದೆ. ಇದನ್ನು ಕನ್ನಡಕ್ಕೆ ಅನುವಾದ ಮಾಡಿದವರಿಗೆ ಅಭಿನಂದನೆಗಳು.

—ಮಹಾಂತೇಶ್ ಅಕ್ಕೂರ್

## ಕನ್ನಡಮ್ಮನ ದತ್ತುಪುತ್ರ

‘ಕನ್ನಡಮ್ಮನ ದತ್ತು ಪುತ್ರ ಅಸ್ಸಾಮಿನ ಭೋಗಾರಾಮ್’ (ಗುರುರಾಜ ಶಾಸ್ತ್ರಿ, ಏ. 28) ಲೇಖನ ಓದಿದೆ. ಬೆಂಗಳೂರಿನ ಫೋನ್ ಸಂಖ್ಯೆ ಟ್ರ್ಯೂ ಕಾಲರ್‌ನಲ್ಲಿ ಕಂಡುಕೊಂಡ ಭೋಗಾರಾಮ್ ಅವರು, ‘ನಾನೇ ಬರುತ್ತೇನೆ’ ಅಂತ ಹೇಳಿದ್ದು ತುಂಬ ಖುಷಿಕೊಟ್ಟಿತು. ಕನ್ನಡ ಭಾಷೆಯ ಬಗ್ಗೆ ಮತ್ತು ಕನ್ನಡಿಗರ ಮೇಲೆ ಅವರಿಗಿರುವ ಪ್ರೀತಿಗೆ ನನ್ನದೊಂದು ಸಲಾಂ. ಅವರ ಮುಗ್ಧ ಫೋಟೊ ಕೂಡಾ ಚೆನ್ನಾಗಿದೆ.

—ಪಾಂಡುರಂಗ, ಹುಬ್ಬಳ್ಳಿ

## ಮನೆಮನೆಯ ಚಂದಿರ

‘ಮನೆಮನೆಯ ಚಂದಿರ’ (ಜಿ. ಪ್ರವೀಣ್‌ಕುಮಾರ್, ಏ. 21) ಪ್ರಬಂಧ ಮೆಚ್ಚುಗೆಯಾಯಿತು. ಎಷ್ಟೊಂದು ವಿಷಯ ಕಲೆ ಹಾಕಿದ್ದಾರೆ. ಅದಕ್ಕೆ ಅಷ್ಟೇ ಆಕರ್ಷಕವಾದ ಶೀರ್ಷಿಕೆಯನ್ನೂ ಕೊಟ್ಟಿದ್ದಾರೆ. ರೊಟ್ಟಿಯ ರುಚಿಯನ್ನೂ, ಅದರ ಸ್ವಾರಸ್ಯವನ್ನೂ ಚೆನ್ನಾಗಿ ವಿವರಿಸಿದ್ದಾರೆ. ಓದಿದ ಮೇಲೆ ಮತ್ತೊಮ್ಮೆ ಬೆಂಗಳೂರಲ್ಲೇ ರೊಟ್ಟಿಯ ಅಂಗಡಿಯನ್ನು ಹುಡುಕಿಕೊಂಡು ಹೋಗುವಂತೆ ಮಾಡಿತು.

—ಎ.ವಿ. ಮುರಳೀಧರ ಆಚಾರ್ಯ, ಬೆಂಗಳೂರು



ಭೋಗಾರಾಮ್ ಬಗ್ಗೆ ತಿಳಿದು ಹೆಮ್ಮೆಯಾಯಿತು. ಭೋಗಾರಾಮ್ ಅವರಂಥ ವ್ಯಕ್ತಿಗಳನ್ನು ಗುರ್ತಿಸಿ, ಎಲ್ಲರಿಗೂ ಪರಿಚಯಿಸಬೇಕಾಗಿದ್ದು ನಮ್ಮೆಲ್ಲರ ಕರ್ತವ್ಯವೂ ಹೌದು.

—ನಂದೀಶ್ವರ ಡಿ.ಬಿ.

ದೂರದ ಗುವಾಹಟಿಯಲ್ಲಿ ಕನ್ನಡದ ಕಂಪನ್ನು ಬೀರುತ್ತಿರುವ ಭೋಗಾರಾಮ್ ಅವರಿಗೆ ಧನ್ಯವಾದಗಳು. ನಿಜಕ್ಕೂ ಇವರ ಕನ್ನಡ ಅಭಿಮಾನ ಶ್ಲಾಘನೀಯ.

—ಭಾರತಿ ಗಂಗಾಧರ್, ಬೆಂಗಳೂರು

## ಸುನ್ನತಿ

‘ಸುನ್ನತಿ’ (ಸ್ವಾಲಿಹ್ ತೋಡಾರ್, ಏ. 28) ಪ್ರಬಂಧ ಚೆನ್ನಾಗಿತ್ತು. ಪ್ರಬಂಧ ಓದಿ ಪದ್ಧತಿಯೊಂದರ ಹಿನ್ನೆಲೆ ಏನೆಂದು ಅರಿವಾಯಿತು. ಲೇಖಕರು ಬಳಸಿದ ಶೈಲಿಯ ಕಾರಣದಿಂದ ಚೆನ್ನಾಗಿ ಓದಿಸಿಕೊಂಡು ಹೋಯಿತು. ಸಿಕ್ಕ ಮೆಚ್ಚುಗೆ ಅರ್ಹವಾಗಿದೆ.

—ವಾಸುದೇವ ಭಟ್



ಪ್ರಬಂಧ ಚೆನ್ನಾಗಿ ಮೂಡಿಬಂದಿದೆ. ಚಿತ್ರವೂ ಕೂಡಾ ಚೆನ್ನಾಗಿದೆ. ಈ ಅಪರೂಪದ ಪ್ರಬಂಧ ಓದಿದ ನನಗೆ ನನ್ನ ಗೆಳತಿಯ ಇಬ್ಬರು ಮಕ್ಕಳಿಗೂ ಮಾಡಿಸಿದ್ದ ಸುನ್ನತಿಯ ಘಟನೆಗಳು ನೆನಪಾದವು. ಲೇಖಕರು ತಿಳಿಸಿದ ಹಾಗೆ ಘಟನೆಗಳು ನಡೆದಿದ್ದವು. ‘ಸುನ್ನತಿ ಮಾಡಿಸುವ ಉದ್ದೇಶ, ಮುಂದಿನ ವೈವಾಹಿಕ ಜೀವನಕ್ಕೆ ತೊಡಕಾಗಬಾರದು ಎಂದು’ ಎಂಬ ವಿಷಯವನ್ನು ನನ್ನ ಗೆಳತಿ ತಿಳಿಸಿದ್ದಳು.

—ಎಂ. ಎಸ್. ಉಷಾ ಪ್ರಕಾಶ್, ಮೈಸೂರು

## ‘ಚಡಗ’ ಕಾದಂಬರಿ ಪ್ರಶಸ್ತಿ

ಪಾಂಡೇಶ್ವರ ಸೂರ್ಯನಾರಾಯಣ ಚಡಗರ ನೆನಪಿನಲ್ಲಿ ಕೊಡುವ ಹನ್ನೆರಡನೆಯ ವರ್ಷದ ಕಾದಂಬರಿ ಪ್ರಶಸ್ತಿಗೆ 2021ರಲ್ಲಿ ಪ್ರಥಮ ಆವೃತ್ತಿಯಾಗಿ ಪ್ರಕಟವಾದ ಕಾದಂಬರಿಗಳನ್ನು ಆಹ್ವಾನಿಸಿದೆ.

ಕೃತಿಯ ಮೂರು ಪ್ರತಿಗಳನ್ನು ಉಪೇಂದ್ರ ಸೋಮಯಾಜಿ, ‘ಶ್ರೀ’ ಚಿತ್ರಪಾಡಿ, ಅಂಚೆ: ಸಾಲಿಗ್ರಾಮ, ಉಡುಪಿ ಜಿಲ್ಲೆ 575225 ದೂ: 9740842722 ಈ ವಿಳಾಸಕ್ಕೆ ಕಳಿಸಿಕೊಡಬಹುದು. ಪುಸ್ತಕ ತಲುಪಲು ಕೊನೆಯ ದಿನಾಂಕ: ಆಗಸ್ಟ್ 30. ಈ ಪ್ರಶಸ್ತಿಯು, ಪ್ರಶಸ್ತಿ ಪತ್ರ, ಸ್ಮರಣಿಕೆ, ₹ 10,000 ಒಳಗೊಂಡಿದೆ.

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in